

ತುಂಗಭದ್ರೆಯ ಹಿನ್ನೀರಿನ ಪ್ರಭಾವಳಿಯಲ್ಲಿ ಕಾಣಿಸುವ 'ಹಳ್ಳಿಗಳ ಚಿತ್ರಗಳು' ಸ್ವರ್ಗಸದೃಶ ಅನುಭವ ನೀಡುವಂತಿವೆ.

# ನಮ್ಮೂರು ಚಂದವೋ

■ ಮಹೇಶ್ವರ ಹುರುಕಡ್ಲಿ



ಏಸೊಂದು ಬಣ್ಣಗಳು,
ಏಸೊಂದು ಭಾವಗಳು...



ನೀರೆಂಬುದು ಜೀವಜಲ, ಅದು ಇರುವಲ್ಲೆಲ್ಲ ಜೀವಸಂಚಾರ. ಮನೆಗೊಂದು ಮರ ಊರಿಗೊಂದು ವನ ಎಂಬ ನಾಣ್ಣುಡಿಯಲ್ಲಿ 'ಹಳ್ಳಿಗೊಂದು ಹೊಳೆ' ಎಂಬುದು ಹಿನ್ನೆಲೆಯಲ್ಲೇ ಉಳಿದ ಉಕ್ತಿಯಾಯಿತೇನೊ? ಹಳ್ಳಿಯೆಂದ ಮೇಲೆ ಯಾವುದಾದರೂ ನೀರಿನ ಆಕರವಿರಬೇಕು. ಅದು ಹಳ್ಳ, ಕೊಳ್ಳ, ಪುಟ್ಟ ಝರಿ, ಕೆರೆ, ತೊರೆ, ದೊಡ್ಡ ಬಾವಿ – ಯಾವುದಾದರೂ ಸರಿಯೇ. ಏಕೆಂದರೆ ಅದು ಹಳ್ಳಿಯ ಸಹಜ ಸೌಂದರ್ಯವನ್ನು ಇಮ್ಮಡಿಗೊಳಿಸುವ ಆಭರಣವಿದ್ದಂತೆ. ನನ್ನೂರಿಗೆ ತುಂಗಭದ್ರಾ ನದಿಯ ಹಿನ್ನೀರೇ ಶೋಭೆ. ಮಳೆಗಾಲದಲ್ಲಿ ತುಂಗಭದ್ರೆಯ ಹಿನ್ನೀರಿನಲ್ಲಿ ನನ್ನೂರು ಮದುವಣಗಿತ್ತಿಯಂತೆ ಸಿಂಗರಗೊಳ್ಳುವುದು.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬಾಚಿಗೊಂಡನಹಳ್ಳಿ ನನ್ನೂರು. ಊರಿನ ಸಹಜ ಸೌಂದರ್ಯಕ್ಕೆ ಕಳಸಪ್ರಾಯವಾಗಿದೆ ಹೊಳೆಯ ಹಿನ್ನೀರು.

ಸೂರ್ಯೋದಯ ಸೂರ್ಯಾಸ್ತಗಳನ್ನು ಹಿನ್ನೀರಿನ ದಡದಲ್ಲಿ ಕಣ್ತುಂಬಿಕೊಳ್ಳುವುದೇ ಒಂದು ಆನಂದ. ಜಂಜಾಟದ ಬದುಕಿನಲ್ಲಿ ಬಸವಳಿದ ಮನಕೆ ಮುದನೀಡುವ ಹೊಳೆಯ ತಂಗಾಳಿ, ಸಾಂತ್ವನ ನೀಡುವ ನೇಸರ–ಮೋಡಗಳ ನೆರಳು ಬೆಳಕಿನ ಆಟ ಪ್ರಕೃತಿ ನಮಗೆ ನೀಡಿರುವ ವರಗಳು.

'ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೋ' ಎನ್ನುವ ಕುವೆಂಪು ಅವರ ಅಮೃತವಾಕ್ಕಿನ ಅರ್ಥ ಅನುಭವವೇದ್ಯವಾಗಿಸಿಕೊಳ್ಳಲಿಕ್ಕೆ ನನ್ನೂರಿಗೆ ಬರಬೇಕು.

ಪ್ರತಿಕ್ರಿಯಿಸಿ: feedback@sudha.co.in